# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ:31.01.2020**

## ಪೂಜ್ಯ ಮಹಾಪೌರರು ರವರಿಂದ ರಾಜರಾಜೇಶ್ವರಿನಗರ ವಲಯದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ಹಾಗೂ ತಪಾಸಣೆ:



ಪೂಜ್ಯ ಮಹಾಪೌರರು ರವರ ಅಧ್ಯಕ್ಷತೆಯಲ್ಲಿ ಇಂದು ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ವಲಯ ಕಛೇರಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ ಹಾಗೂ ತಪಾಸಣೆ ನಡೆಸಿದರು. ಈ ವೇಳೆ ಶಿಕ್ಷಣ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸ್ಥಳೀಯ ಸದಸ್ಯರುಗಳಾದ ಶ್ರೀಮತಿ ಮಂಜುಳಾ ನಾರಾಯಣ ಸ್ವಾಮಿ, ವಾರ್ಡ್ ಮಟ್ಟದ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರು ಶ್ರೀ ಜಿ.ಕೆ.ವೆಂಕಟೇಶ್, ಸ್ಥಳೀಯ ಸದಸ್ಯರುಗಳಾದ ಶ್ರೀ ವೇಲುನಾಯಕರ್, ಶ್ರೀಮತಿ ಉಮಾದೇವಿ ನಾಗರಾಜು, ಮೋಹನ್ ಕುಮಾರ್, ಮಮತ ಕೆ. ವಾಸುದೇವ್, ವಲಯ ವಿಶೇಷ ಆಯುಕ್ತರು ಶ್ರೀ ಲೋಕೇಶ್, ಪ್ರಧಾನ ಅಭಿಯಂತರರು ಶ್ರೀ ಎಂ.ಆರ್.ವೆಂಕಟೇಶ್, ಮುಖ್ಯ ಅಭಿಯಂತರರುಗಳಾದ ಶ್ರೀ ರಮೇಶ್, ಶ್ರೀ ಮೋಹನ್ ಕೃಷ್ಣ, ವಲಯ ಜಂಟಿ ಆಯುಕ್ತರು ಶ್ರೀ ಬಾಲಶೇಖರ, ತೋಟಗಾರಿಕಾ ವಿಭಾಗ ಉಪ ನಿರ್ದೇಶಕರು ಶ್ರೀ ಗಂಗಾಧರ ಸ್ವಾಮಿ, ಕಂದಾಯ ಹಾಗೂ ಆರೋಗ್ಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸಭೆ ಪ್ರಾರಂಭಿಸಿದ ಬಳಿಕ ಅಧಿಕಾರಿಗಳ ಹಾಜರಾತಿ ಪಡೆಯಲಾಯಿತು. ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಶೋಕಾಸ್ ನೋಟೀಸ್ ಜಾರಿಗೊಳಿಸಲು ವಲಯ ವಿಶೇಷ ಆಯುಕ್ತರಿಗೆ ಮಹಾಪೌರರು ಸೂಚನೆ ನೀಡಿದರು.

**ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಹಪೌರರು,** ನಗರದಲ್ಲಿ ಕಸದ ಸಮಸ್ಯೆ ನಿವಾರಣೆ ಮಾಡುವ ಜವಾಬ್ದಾರಿ ಆರೋಗ್ಯಾಧಿಕಾರಿಗಳಿಗಷ್ಟೆ ಅಲ್ಲದೆ, ಎಲ್ಲಾ ಇಲಾಖೆ ಅಧಿಕಾರಿಗಳಿಗೂ ಇರಬೇಕು. ಎಲ್ಲಾ ಅಧಿಕಾರಿಗಳು ಕೈಜೋಡಿಸಿದರೆ ಮಾತ್ರ ಕಸದ ಸಮಸ್ಯೆ ನಿವಾರಣೆಯಾಗಲು ಸಾಧ್ಯ. ಆದ್ದರಿಂದ ಇನ್ನುಮುಂದೆ ಎಲ್ಲಾ ಅಧಿಕಾರಿಗಳಿಗು ಕಸದ ಸಮಸ್ಯೆ ನಿವಾರಿಸುವ ಜವಾಬ್ದಾರಿ ನೀಡಿ ಕಸಮುಕ್ತ ನಗರವನ್ನಾಗಿಸಲು ಕ್ರಮ ಕೈಗೊಳ್ಳುವಂತೆ ಜಂಟಿ ಆಯುಕ್ತರಿಗೆ ಮಹಾಪೌರರು ಸೂಚನೆ ನೀಡಿದರು.

ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದಂತೆ ಉದ್ದಿಮೆ ಪರವಾನಗಿ ಪಡೆಯದ ಮಳಿಗೆಗಳನ್ನು ಪತ್ತೆಮಾಡಿ ಎಲ್ಲಾ ಮಳಿಗೆಗಳಿಗೆ ಪರಿವಾನಗಿ ನೀಡಿ ಪಾಲಿಕೆ ಹೆಚ್ಚು ಆದಾಯ ಬರುವಂತೆ ಮಾಡಬೇಕು. ಈ ಸಂಬಂಧ ಕೂಡಲೆ ಸೂಕ್ತಕ್ರಮ ಕೈಗೊಳ್ಳುವಂತೆ ಆರೋಗ್ಯಾಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ಒಟ್ಟು 184 ಉದ್ಯಾನಗಳಿದ್ದು, 110 ಉದ್ಯಾನಗಳನ್ನು ಅಭಿವೃದ್ಧಿಗೊಳಿಸಲಾಗಿದೆ. 74 ಉದ್ಯಾನಗಳನ್ನು ಅಭಿವೃದ್ಧಿಗೊಳಿಸಬೇಕಿದ್ದು, 3 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಬೇಸಿಗೆಯಲ್ಲಿ ಟ್ಯಾಂಕರ್ ಮೂಲಕ ಉದ್ಯಾನಗಳಿಗೆ ನೀರು ಹಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತೋಟಗಾರಿಕಾ ಅಧಿಕಾರಿ ತಿಳಿಸಿದರು. ಅದಕ್ಕೆ ಮಹಾಪೌರರು ಪ್ರತಿಕ್ರಿಯಿಸಿ, ಉದ್ಯಾನಗಳ ಅಭಿವೃದ್ಧಿ, ನಿರ್ವಹಣೆ ಹಾಗೂ ಬೋರ್‌ವೆಲ್‌ಗಳಿಗೆ ಎಷ್ಟು ಅನುದಾನ ಬೇಕಿದೆ ಎಂಬ ಅಂದಾಜು ವೆಚ್ಚ ಸಿದ್ದಪಡಿಸಿಕೊಡಿ ಅದನ್ನು ಈ ಬಾರಿಯ ಆಯವ್ಯಯ(ಬಜೆಟ್)ದಲ್ಲಿ ಅನುದಾನ ಮೀಸಲಿಡಲಾಗುವುದು. ಅಲ್ಲದೆ ಉದ್ಯಾನಗಳಲ್ಲಿ ಹಿಂಗು ಗುಂಡಿಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಲ್ಲಿ 2.53 ಲಕ್ಷ ಆಸ್ತಿಗಳು ತೆರಿಗೆ ವ್ಯಾಪ್ತಿಗೊಳಪಟ್ಟಿದ್ದು, ಒಟ್ಟು 274 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹಿಸುವ ಗುರಿಯಿದೆ. ಈ ಪೈಕಿ ಈಗಾಗಲೇ 165 ಕೋಟಿ ರೂ. ಸಂಗ್ರಹಿಸಲಾಗಿದೆ ಎಂದು ಕಂದಾಯ ಅಧಿಕಾರಿ ತಿಳಿಸಿದರು. ಅದಕ್ಕೆ ಮಹಾಪೌರರು ಪ್ರತಿಕ್ರಿಯಿಸಿ, ತೆರಿಗೆ ವ್ಯಾಪ್ತಿಗೊಳಪಡದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಸೇರಿಸಿ ಹೆಚ್ಚು ತೆರಿಗೆ ಸಂಗ್ರಹಿಸಲು ಕ್ರಮ ಕೈಗೊಳ್ಳುವಂತೆ ಕಂದಾಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

## <u>ರಾಜಕಾಲುವೆಗಳ ತಪಾಸಣೆ:</u>

ಸಭೆ ನಡೆದ ಬಳಿಕ ಬೆಮೆಲ್ ಲೇಔಟ್ ವ್ಯಾಪ್ತಿಯ ಪಟ್ಟಣಗೆರೆ ರಸ್ತೆಯಲ್ಲಿ ಹಲಗೆ ವಡೇರಹಳ್ಳಿ ಕೆರೆಯಿಂದ ಕೆಂಚೇನಹಳ್ಳಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯನ್ನು ತಪಾಸಣೆ ನಡೆಸಿ, ದುರಸ್ತಿ ಕಾಮಗಾರಿಯನ್ನು ಕೂಡಲೆ ಕೈಗೆತ್ತಿಕೊಂಡು ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಮಹಾಪೌರರು ಅಧಿಕಾರಿಗೆ ತಾಕೀತು ಮಾಡಿದರು.

ತದನಂತರ ಮೈಸೂರು ರಸ್ತೆ ಜ್ಞಾನಭಾರತಿ ವಿಶ್ವವಿದ್ಯಾಲಯದ ಬಳಿಯ ವೃಷಭಾವತಿ ರಾಜಕಾಲುವೆ ತಪಾಸಣೆ ನಡೆಸಿ, ಕಾಲುವೆಯಲ್ಲಿರುವ ತ್ಯಾಜ್ಯ ಹಾಗೂ ಹೂಳನ್ನು ತೆರವುಗೊಳಿಸಬೇಕು. ರಾಜಕಾಲುವೆ ದುರಸ್ತಿ ಕಾಮಗಾರಿಗೆ ಗುತ್ತಿಗೆ ಪಡೆದಿರುವ ಸಂಸ್ಥೆಯು ಸಮರ್ಪಕವಾಗಿ ಕಾರ್ಯ ನಡೆಸುತ್ತಿಲ್ಲ. ಈ ಪರಿಣಾಮ ಗುತ್ತಿಗೆ ನೀಡಿರುವ ಸಂಸ್ಥೆಯ ಮೇಲೆ ಶಿಸ್ತು ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚೆನೆ ನೀಡಲಾಯಿತು.

**ಈ ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**